Comp No - 26054
07/04/22

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಫ್ರೂಟ್ಸ್ ಮತ್ತು ಕಾವೇರಿ ತಂತ್ರಾಂಶವನ್ನು ಸಂಯೋಜನೆಗೊಳಿಸಿ ರೈತರು ಬೆಳೆ ಸಾಲ ನೋಂದಾಯಿಸಲು ರೈತರು ಭೌತಿಕವಾಗಿ ಉಪ ನೋಂದಣಾಧಿಕಾರಿಗಳ ಕಛೇರಿಗೆ ಭೇಟಿ ನೀಡುವುದನ್ನು ತಪ್ಪಿಸುವ ಬಗ್ಗೆ.

**ಓದಲಾಗಿದೆ:**
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/83/ಎಂಎನ್ಎಂಯು/2021 ದಿನಾಂಕ: 23-06-2021 ಮತ್ತು 09-12-2021.
2) ಸರ್ಕಾರದ ಪತ್ರ ಸಂಖ್ಯೆ: ಕಂಇ/123/ಎಂಎನ್ಎಂಯು/2021 ದಿ:29.12.2021
3) 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:359.

* * *

ಸ್ವೀಕೃತಿ ಸಂಖ್ಯೆ: 30 ದಿನಾಂಕ: 06/04/22

**ಪ್ರಸ್ತಾವನೆ:**

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶವನ್ನು ಕೃಷಿ ಜಮೀನಿನ ನೋಂದಣಿಗೆ ಭೂಮಿ ತಂತ್ರಾಂಶದೊಂದಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 103 ಎಂಆರ್ಆರ್ 2002, ದಿನಾಂಕ:15-05-2006ರಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಸ್ವತ್ತುಗಳ ನೋಂದಣಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಸ್ವತ್ತು ತಂತ್ರಾಂಶದೊಂದಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013, ದಿನಾಂಕ: 18-09-2014 ರಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಸ್ವತ್ತುಗಳ ನೋಂದಣಿಗೆ ಇ-ಆಸ್ತಿ ತಂತ್ರಾಂಶದೊಂದಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 40 ಮುನೋಮು 2017 (ಭಾಗ-1), ದಿನಾಂಕ: 29-01-2020 ರಂತೆ ಸಂಯೋಜನೆ ಮಾಡಲಾಗಿರುತ್ತದೆ.

ಹಣಕಾಸು ಸಂಸ್ಥೆ Karnataka Agricultural Credit Operation & Miscellaneous Provision Act-1974ರಡಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಉಪ ನೋಂದಣಿ ಕಛೇರಿಗಳಿಗೆ ಕಳುಹಿಸುವ ಘೋಷಣಾ ಪತ್ರಗಳನ್ನು (Declaration/Form-3) ಕಾವೇರಿ ತಂತ್ರಾಂಶದಲ್ಲಿ ಫೈಲಿಂಗ್ ಮಾಡಲು ರೈತರು ಅಥವಾ ಬ್ಯಾಂಕಿನಿಂದ ಫಾರ್ಮ್-3ಅನ್ನು ಉಪ ನೋಂದಣಿ ಕಛೇರಿಗಳಿಗೆ ಭೌತಿಕವಾಗಿ ಕಳುಹಿಸಲಾಗುತ್ತಿತ್ತು. ಕಾರಣಾಂತರಗಳಿಂದ ಇವುಗಳ ಫೈಲಿಂಗ್ ಸಾಧ್ಯವಾಗದೇ ಇರುವ ಕಾರಣ ರೈತರಿಗೆ ಕೃಷಿ ಸಾಲ ಸಿಗುವುದು ನಿಧಾನವಾಗಿರುತ್ತದೆ. ಇದನ್ನು ಸರಳೀಕರಿಸುವ ಸಂಬಂಧ, ಇ-ಆಡಳಿತ ಇಲಾಖೆಯು FRUITS ನೊಂದಿಗೆ ಕಾವೇರಿಯನ್ನು ಸಂಯೋಜನೆಗೊಳಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಸದರಿ ತಂತ್ರಾಂಶದಿಂದ ಬರುವ ದತ್ತಾಂಶವನ್ನು ಕಡ್ಡಾಯವಾಗಿ ಬಳಸಿಕೊಂಡು ನೋಂದಣಿ ಮಾಡಲು ಮೇಲೆ ಓದಲಾದ ಕ್ರಮ ಸಂಖ್ಯೆ:1 ರ ಅಧಿಸೂಚನೆಯಲ್ಲಿ ಆದೇಶಿಸಲಾಗಿತ್ತು.

ಫ್ರೂಟ್ಸ್ ತಂತ್ರಾಂಶವನ್ನು ಉಪಯೋಗಿಸುವ ಬಗ್ಗೆ ಸಹಕಾರ ಇಲಾಖೆಯ ಹಾಗೂ ನೋಂದಣಿ ಕಛೇರಿಯ ಅಧಿಕಾರಿಗಳು ಪೂರ್ಣ ಪ್ರಮಾಣದಲ್ಲಿ ತರಬೇತಿ ಹೊಂದಿಲ್ಲದ ಕಾರಣ ಸಾಲ ಸೌಲಭ್ಯ ಪಡೆಯಲು ರೈತರಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರವು ಮನಗಂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪೀ ಕಾರ್ಡ್ ಬ್ಯಾಂಕ್‌ಗಳು ಮತ್ತು ಡಿಸಿಸಿ ಬ್ಯಾಂಕುಗಳ ಶಾಖೆಗಳಿಂದ Declaration/Form-3 ಭೌತಿಕವಾಗಿ ಸಲ್ಲಿಸಲು ದಿನಾಂಕ:31.03.2022ರ ವರೆಗೆ ಕಾಲಾವಕಾಶವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ:2ರ ದಿನಾಂಕ:29.12.2021ರ ಪತ್ರದಲ್ಲಿ ವಿಸ್ತರಿಸಲಾಗಿತ್ತು.

2022-23ನೇ ಸಾಲಿನ ಆಯವ್ಯಯದ ಕಂಡಿಕೆ:359ರಲ್ಲಿ ಫ್ರೂಟ್ಸ್ ಮತ್ತು ಕಾವೇರಿ ತಂತ್ರಾಂಶಗಳನ್ನು ಸಂಯೋಜನೆಗೊಳಿಸಿ ರೈತರು ಬೆಳೆ ಸಾಲ ನೋಂದಾಯಿಸಲು ಉಪ ನೋಂದಣಾಧಿಕಾರಿಗಳ ಕಛೇರಿಗೆ ಭೇಟಿ ನೀಡುವುದನ್ನು ತಪ್ಪಿಸಲಾಗುವುದು ಎಂದು ಸರ್ಕಾರವು ಘೋಷಿಸಿರುತ್ತದೆ.

2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ರೈತರು ಕೃಷಿ ಸಾಲಗಳ ಘೋಷಣಾ ಪತ್ರಗಳ ನೋಂದಣಿಗಾಗಿ/ಫೈಲಿಂಗ್‌ಗಾಗಿ ಹಾಗೂ ಇವುಗಳಿಗೆ ಸಂಬಂಧಿಸಿದ ಋಣಭಾರ

Scanned by TapScanner

ಪತ್ರಗಳನ್ನು ಪಡೆಯಲು ಉಪ ನೋಂದಣಿ ಕಛೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಘೋಷಣಾ ಪತ್ರಗಳನ್ನು ಆನ್‌ಲೈನ್ ಮುಖಾಂತರ ಫ್ರೂಟ್ಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ದಿನಾಂಕ:01.04.2022 ರಿಂದ ಜಾರಿಗೆ ಬರುವಂತೆ ಬಳಸುವಂತೆ ಆದೇಶಿಸಲು ಸರ್ಕಾರವು ನಿರ್ಣಯಿಸಿದ್ದು, ಅದಕ್ಕಾಗಿ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಕಂಇ/83/ಎಂಎನ್‌ಎಂಯು/2021**
**ಬೆಂಗಳೂರು, ದಿನಾಂಕ:31-03-2022**

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2022-23ನೇ ಸಾಲಿನ ಆಯವ್ಯಯ ಕಂಡಿಕೆ-359ರಲ್ಲಿ ಘೋಷಿಸಿರುವಂತೆ, ದಿನಾಂಕ:01.04.2022 ರಿಂದ ಕಡ್ಡಾಯವಾಗಿ ಜಾರಿಗೆ ಬರುವಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದಲ್ಲಿ ರೈತರು ಘೋಷಣೆ ಪತ್ರಗಳನ್ನು ಸಲ್ಲಿಸುವಾಗ ಬ್ಯಾಂಕಿನಿಂದ ನಮೂನೆ-3ನ್ನು ಉಪ ನೋಂದಣಾಧಿಕಾರಿಗಳ ಕಛೇರಿಗೆ ಭೌತಿಕವಾಗಿ ಸಲ್ಲಿಸುತ್ತಿದ್ದನ್ನು ಸರಳೀಕರಣಗೊಳಿಸಲು ಇ-ಆಡಳಿತ ಇಲಾಖೆಯು ಅಭಿವೃದ್ಧಿಪಡಿಸಿರುವ FRUITS ತಂತ್ರಾಂಶದೊಂದಿಗೆ ಕಾವೇರಿ ತಂತ್ರಾಂಶವನ್ನು ಸಂಯೋಜನೆಗೊಳಿಸಲು ಆದೇಶಿಸಲಾಗಿರುತ್ತದೆ. ಅದೇರೀತಿ Mortgage(ಅಡಮಾನ) ಮಾಡುವಾಗಲೂ ಸಹ FRUITS ತಂತ್ರಾಂಶದಿಂದ ಬರುವ data(ದತ್ತಾಂಶ)ವನ್ನು ಬಳಸಿ ನೋಂದಣಿ ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎ.ಜಿ.ವೀಣಾ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:**

ಸಂಕಲನಕರಾರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಇ-ಗೆಜೆಟ್‌ನಲ್ಲಿ ಪ್ರಕಟಣೆ ಮಾಡಲು ಕೋರಲಾಗಿದೆ.

**ಪ್ರತಿ:**

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ/ಕೃಷಿ ಮತ್ತು ತೋಟಗಾರಿಕೆ ಇಲಾಖೆ.
3) ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ. ಬೆಂಗಳೂರು.
6) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ. } ಐಜಿಆರ್‌ರವರ ಮುಖಾಂತರ.
7) ಎಲ್ಲಾ ಹಿರಿಯ /ಉಪ ನೋಂದಣಾಧಿಕಾರಿಗಳಿಗೆ. } ಐಜಿಆರ್‌ರವರ ಮುಖಾಂತರ.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯುಪಿಓಆರ್), ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ನೋಂದಣಿ ಮತ್ತು ಮುದ್ರಾಂಕ) ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by TapScanner